www.varthabharati.in
ಜನದನಿಯ ಸಾರಥಿ
epaper.varthabharati.in

# ವಾರ್ತಾ ಭಾರತಿ

ಸತ್ಯ ಎಲ್ಲೆಡೆಗೆ

◆ ಮಂಗಳೂರು ◆ ಬೆಂಗಳೂರು ◆ ಶಿವಮೊಗ್ಗ
7 ಅಕ್ಟೋಬರ್ 2018
ರವಿವಾರ
VARTHABHARATHI KANNADA DAILY

/Varthabharati REGD.NO: MNG/958/2016-18 RNI NO. KAR KAN/2003/11378 ● ಸಂಪುಟ 16 ● ಸಂಚಿಕೆ 39 ● ಮಂಗಳೂರು

CENTRAL LIBRARY

Best Price Guarantee
FURNITURE MALL
UDUPI : Kadiyali
MANGALORE : Kottara
SHIMOGA : BH Road

■ ಶಿವಮೊಗ್ಗ, ಮಂಡ್ಯ, ಬಳ್ಳಾರಿ ಲೋಕಸಭೆ ಉಪಚುನಾವಣೆ ದಿನಾಂಕ ಘೋಷಣೆ

# ಬಿಜೆಪಿ-ಕಾಂಗ್ರೆಸ್-ಜೆಡಿಎಸ್‌ಗೆ ಪ್ರತಿಷ್ಠೆಯ ಪ್ರಶ್ನೆ

● ಬಿ. ರೇಣುಕೇಶ್


ಬಿ.ಎಸ್.ಯಡಿಯೂರಪ್ಪ


ಬಿ.ವೈ. ರಾಘವೇಂದ್ರ


ಕಿಮ್ಮನೆ ರತ್ನಾಕರ


ಮಂಜುನಾಥ ಭಂಡಾರಿ


ಮಧು ಬಂಗಾರಪ್ಪ

ಶಿವಮೊಗ್ಗ, ಅ.6: ದೇಶಾದ್ಯಂತ 2019ರ ಎಪ್ರಿಲ್-ಮೇ ತಿಂಗಳಲ್ಲಿ ನಡೆಯಲಿರುವ 17ನೇ ಲೋಕಸಭೆ ಸಾರ್ವತ್ರಿಕ ಚುನಾವಣೆಯ ಪೂರ್ವಭಾವಿ ಸಿದ್ಧತೆ ನಡೆಯುತ್ತಿದ್ದರೆ, ಇದಕ್ಕೂ ಮುನ್ನ ಶಿವಮೊಗ್ಗ, ಬಳ್ಳಾರಿ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರದ ಮತದಾರರು ಉಪ ಚುನಾವಣೆಗೆ ಮತ ಹಾಕಲು ಸಿದ್ಧರಾಗಬೇಕಾಗಿದೆ.

ಹೌದು. ಸದಸ್ಯರ ರಾಜೀನಾಮೆಯಿಂದ ಖಾಲಿ ಉಳಿದಿರುವ ಈ ಮೂರು ಕ್ಷೇತ್ರಗಳಿಗೆ, ಕೇಂದ್ರ ಚುನಾವಣಾ ಆಯೋಗ ಉಪ ಚುನಾವಣೆ ಘೋಷಿಸಿ, ಕ್ಷಣದಿಂದಲೇ ನೀತಿ-ಸಂಹಿತೆ ಜಾರಿಗೊಳಿಸಿ ಆದೇಶಿಸಿದೆ. ಇದು ಸ್ಥಳೀಯ ರಾಜಕೀಯ ವಲಯದಲ್ಲಿ ತೀವ್ರ ಸಂಚಲನ ಸೃಷ್ಟಿಸಿದೆ.

ಅ.9ರಂದು ಅಧಿಸೂಚನೆ ಪ್ರಕಟವಾಗಲಿದೆ. ಅ.16 ನಾಮಪತ್ರ ಸಲ್ಲಿಸಲು ಅಂತಿಮ ದಿನ ನಿಗದಿಪಡಿಸಲಾಗಿದ್ದು, ಅ. 17 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಅ.20 ರಂದು ನಾಮಪತ್ರ ವಾಪಸ್ ಪಡೆಯಲು ಅಂತಿಮ ದಿನವಾಗಿದ್ದು, ನವೆಂಬರ್ 3 ರಂದು ಮತದಾನ ನಡೆದು ನ. 6 ರಂದು ಮತ ಎಣಿಕೆ ಕಾರ್ಯ ನಡೆಯಲಿದೆ. ಒಟ್ಟಾರೆ ನ.8ರ ವರೆಗೆ ನೀತಿ-ಸಂಹಿತೆ ಜಾರಿಯಲ್ಲಿರಲಿದೆ.

ರಾಜೀನಾಮೆ: ಕಳೆದ ಮೇ ತಿಂಗಳಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಲೋಕಸಭಾ ಸದಸ್ಯರಾಗಿದ್ದ ಬಿಜೆಪಿಯ ಬಿ.ಎಸ್. ಯಡಿಯೂರಪ್ಪ, ಬಿ.ಶ್ರೀರಾಮುಲು ಹಾಗೂ ಜೆಡಿಎಸ್‌ನ ಸಿ.ಎಸ್. ಪುಟ್ಟರಾಜು ಅವರು ಕ್ರಮವಾಗಿ ಶಿಕಾರಿಪುರ, ಮೊಳಕಾಲ್ಮೂರು ಹಾಗೂ ಮೇಲುಕೋಟೆ ವಿಧಾನಸಭಾ ಕ್ಷೇತ್ರಗಳಿಂದ ಸ್ಪರ್ಧಿಸಿ ಆಯ್ಕೆಯಾಗಿದ್ದರು.

ವಿಧಾನಸಭೆ ಹಾಗೂ ಲೋಕಸಭೆ ಸದಸ್ಯತ್ವದಲ್ಲಿ ಒಂದನ್ನು ಮಾತ್ರ ಉಳಿಸಿಕೊಳ್ಳಬೇಕಾಗಿದ್ದ ಕಾರಣದಿಂದ, ಈ ಮೂವರು ನಾಯಕರು ಸಂಸತ್ ಸದಸ್ಯತ್ವಕ್ಕೆ ಕಳೆದ ಮೇ ತಿಂಗಳಲ್ಲಿ ರಾಜೀನಾಮೆ ನೀಡಿದ್ದರು. ಈ ಕಾರಣದಿಂದ ಯಡಿಯೂರಪ್ಪ ಅವರು ಆಯ್ಕೆಯಾಗಿದ್ದ ಶಿವಮೊಗ್ಗ, ಶ್ರೀರಾಮುಲು ಆಯ್ಕೆಯಾಗಿದ್ದ ಬಳ್ಳಾರಿ ಹಾಗೂ ಪುಟ್ಟರಾಜು ಆಯ್ಕೆಯಾಗಿದ್ದ ಮಂಡ್ಯ ಲೋಕಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಸುವುದು ಅನಿವಾರ್ಯವಾಗಿತ್ತು.

## ಪಕ್ಷಗಳಿಗೆ ಬಿಸಿತುಪ್ಪವಾಗಿ ಪರಿಣಮಿಸಿದ ಚುನಾವಣಾ ಆಯೋಗದ ನಿರ್ಧಾರ

17ನೇ ಸಾರ್ವತ್ರಿಕ ಚುನಾವಣೆಗೆ ಕೇವಲ ಐದಾರು ತಿಂಗಳು ಬಾಕಿಯಿರುವ ಕಾರಣದಿಂದ, ಉಪ ಚುನಾವಣೆ ಅನುಮಾನ ಎಂಬ ಮಾತುಗಳು ರಾಜಕೀಯ ವಲಯದಿಂದ ಕೇಳಿಬಂದಿದ್ದವು. ಆದರೆ, ಕೇಂದ್ರ ಚುನಾವಣಾ ಆಯೋಗ ಏಕಾಏಕಿ ಉಪ ಚುನಾವಣೆ ಘೋಷಿಸಿರುವುದು ಪ್ರಮುಖ ರಾಜಕೀಯ ಪಕ್ಷಗಳಿಗೆ ನುಂಗಲಾರದ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಮೂರು ಕ್ಷೇತ್ರಗಳಿಗೆ ನಡೆಯುತ್ತಿರುವ ಈ ಉಪ ಚುನಾವಣೆಯೂ ಪ್ರಮುಖ ರಾಜಕೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳಿಗೆ ಅತ್ಯಂತ ಮಹತ್ವದ್ದಾಗಿದೆ. ಈ ಮೂರು ಕ್ಷೇತ್ರಗಳ ಫಲಿತಾಂಶ ಮುಂಬರುವ ಸಾರ್ವತ್ರಿಕ ಚುನಾವಣೆ ಮೇಲೆಯೂ ಪರಿಣಾಮ ಬೀರುವುದು ಬಹುತೇಕ ನಿಶ್ಚಿತವಾಗಿರುವುದರಿಂದ, ಭಾರೀ ಪೈಪೋಟಿ ಏರ್ಪಡುವ ಲಕ್ಷಣಗಳು ಗೋಚರವಾಗುತ್ತಿವೆ.

## ಬಿಜೆಪಿಯಿಂದ ಬಿಎಸ್‌ವೈ ಪುತ್ರನಿಗೆ ಟಿಕೆಟ್? ಈಶ್ವರಪ್ಪ ಅಸಮಾಧಾನ?

ಬಿಜೆಪಿಯಲ್ಲಿಯೂ ಟಿಕೆಟ್‌ಗೆ ಭಾರೀ ಪೈಪೋಟಿಯಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ, ಮಾಜಿ ಲೋಕಸಭಾ ಸದಸ್ಯ ಬಿ.ವೈ. ರಾಘವೇಂದ್ರ ಹೆಸರು ಮುಂಚೂಣಿಯಲ್ಲಿ ಕೇಳಿಬರುತ್ತಿದೆ. ಬಹುತೇಕ ಅವರಿಗೆ ಟಿಕೆಟ್ ಖಚಿತ ಎಂದು ಹೇಳಲಾಗುತ್ತಿದೆಯಾದರೂ, 'ಪಕ್ಷದಲ್ಲಿ ಇನ್ನೂ ಕೆಲ ಮುಖಂಡರು ಟಿಕೆಟ್ ಆಕಾಂಕ್ಷಿಗಳಾಗಿದ್ದು, ಪಕ್ಷದ ವರಿಷ್ಠರು ಅಭ್ಯರ್ಥಿಯ ಆಯ್ಕೆ ನಡೆಸಲಿದ್ದಾರೆ' ಎನ್ನುವ ಮೂಲಕ ಶಾಸಕ ಈಶ್ವರಪ್ಪ, ರಾಘವೇಂದ್ರ ಅವರಿಗೆ ಟಿಕೆಟ್ ನೀಡುವ ಬಗ್ಗೆ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದ್ದರು.

## ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸಾಧ್ಯತೆ?

ಪ್ರಸ್ತುತ ಉಪ ಚುನಾವಣೆಯಲ್ಲಿ, ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್-ಜೆಡಿಎಸ್ ಪಕ್ಷಗಳು ಮೈತ್ರಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಸಾಧ್ಯತೆಯಿದೆ. ಕಾಂಗ್ರೆಸ್‌ನಿಂದ ಕೆಪಿಸಿಸಿ ಉಪಾಧ್ಯಕ್ಷ ಮಂಜುನಾಥ ಭಂಡಾರಿ, ಮಾಜಿ ಸಚಿವ ಕಿಮ್ಮನೆ ರತ್ನಾಕರ ಅವರ ಹೆಸರುಗಳು ಪ್ರಮುಖವಾಗಿ ಕೇಳಿಬರುತ್ತಿವೆ. ಜೆಡಿಎಸ್‌ನಿಂದ ಮಾಜಿ ಶಾಸಕ ಮಧು ಬಂಗಾರಪ್ಪ ಹೆಸರು ಮುಂಚೂಣಿಯಲ್ಲಿದೆ. ಕಾಂಗ್ರೆಸ್-ಜೆಡಿಎಸ್ ಮೈತ್ರಿ ಅಭ್ಯರ್ಥಿ ಕಣಕ್ಕಿಳಿಸುವ ನಿರ್ಧಾರ ಕೈಗೊಂಡರೆ, ಈ ಮೂವರಲ್ಲಿ ಒಬ್ಬರು ಅಭ್ಯರ್ಥಿಯಾಗುವುದು ಬಹುತೇಕ ಖಚಿತ ಎಂದು ಹೇಳಲಾಗುತ್ತಿದೆ.

ಸೋಮವಾರ,8 ಅಕ್ಟೋಬರ್ 2018 | ಪುಟಗಳು: 12+4 | ಬೆಲೆ: ₹ 5.00
www.vijaykarnataka.com
ಸಂಪುಟ: 18 | ಸಂಚಿಕೆ: 73
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲ...

VK
ವಿಜಯ ಕರ್ನಾಟಕ



ವಿನೂ ಮಂಕಡ್ ಕ್ರಿಕೆಟ್: 30 ರನ್‌ಗೆ 6 ವಿಕೆಟ್ ಉರುಳಿಸಿ ಮಿಂಚಿದ ಅರ್ಜುನ್ ತೆಂಡುಲ್ಕರ್ P11

ಆಯುಷ್ಮಾನ್ ಭಾರತ್ ಯೋಜನೆಯಡಿ ಎರಡನೇ ಸಲ ಚಿಕಿತ್ಸೆ ಪಡೆಯಲು ಆಧಾರ್ ಕಡ್ಡಾಯ P09

ಮೂರು ವರ್ಷದಲ್ಲಿ ದೇಶದಿಂದ ನಕ್ಸಲ್ ಪೀಡೆ ನಿವಾರಣೆ: ರಾಜನಾಥ್ ಸಿಂಗ್ P10

# ಉಪಸಮರ ಕಣದಲ್ಲಿ ಫ್ಯಾಮಿಲಿ ಪ್ಲಾನಿಂಗ್!

**ವಿಕ ಸುದ್ದಿಲೋಕ** ಬೆಂಗಳೂರು

ಬಯಸದೆ ಬಂದಿರುವ ಲೋಕಸಭೆ ಉಪ ಸಮರದ ಬಗ್ಗೆ ಮೂರೂ ಪ್ರಮುಖ ಪಕ್ಷಗಳಲ್ಲೂ ನಿರಾಸಕ್ತಿ ಮೂಡಿದೆ. ಆದರೆ, ಇಂಥ ವಿಚಿತ್ರ ಸನ್ನಿವೇಶದ ನಡುವೆಯೇ 'ಕುಟುಂಬ ರಾಜಕಾರಣ' ಚುರುಕಾಗಿದೆ. ಅನಿರೀಕ್ಷಿತವಾಗಿ ಸಿಕ್ಕ ಅವಕಾಶದಲ್ಲೇ ತಮ್ಮ ಕುಟುಂಬದ ಕುಡಿಯ ನೆಟ್ಟು ರಾಜಕೀಯವಾಗಿ ಬೇರು ಬಿಡಲು ಎಲ್ಲ ಪಕ್ಷಗಳಲ್ಲೂ ಸದ್ದಿಲ್ಲದೇ ತಯಾರಿ ನಡೆದಿದೆ.

ಈಗ ನಡೆಯುವ ಉಪಚುನಾವಣೆಯಲ್ಲಿ ಯಾರೇ ಗೆದ್ದರೂ ಅಧಿಕಾರಾವಧಿ ನಾಲ್ಕು ತಿಂಗಳು ಮಾತ್ರ. ಹೀಗಾಗಿ ಈಗ ಕೋಟ್ಯಂತರ ರೂ. ಸುರಿದು ಗೆದ್ದರೂ ಅಧಿಕಾರ ಅನುಭವಿಸುವುದು ಕ್ಷಣಿಕ ಕಾಲ ಮಾತ್ರ. ಆ ನಂತರದಲ್ಲಿ ಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಇವರಿಗೇ ಟಿಕೆಟ್ ಸಿಗುತ್ತದೆ ಎಂಬ ಖಾತರಿಯೂ ಇಲ್ಲ. ಹೀಗಾಗಿ ಎಲ್ಲ ಪಕ್ಷಗಳ ಇತರ ನಾಯಕರು ಈ ಚುನಾವಣೆ ಬಗ್ಗೆ ನಿರಾಸಕ್ತಿ ತಾಳಿದ್ದಾರೆ. »07

## ಸಂಭಾವ್ಯರಲ್ಲಿ ಕುಟುಂಬದ ಕುಡಿಗಳೇ ಹೆಚ್ಚು

### ಲೋಕಸಭೆ ಕ್ಷೇತ್ರ






**ಶಿವಮೊಗ್ಗ**
**ಬಿಜೆಪಿ:** ಬಿ.ವೈ. ರಾಘವೇಂದ್ರ
**ಜೆಡಿಎಸ್:** ಮಧು ಬಂಗಾರಪ್ಪ
**ಕಾಂಗ್ರೆಸ್:** ಮಂಜುನಾಥ್ ಭಂಡಾರಿ / ಕಿಮ್ಮನೆ ರತ್ನಾಕರ್



**ಬಳ್ಳಾರಿ**
**ಬಿಜೆಪಿ:** ಶಾಂತಾ
**ಕಾಂಗ್ರೆಸ್:** ಪ್ರಸಾದ್



**ಮಂಡ್ಯ**
**ಜೆಡಿಎಸ್:** ನಿಖಿಲ್ ಗೌಡ / ಲಕ್ಷ್ಮೀ ಅಶ್ವಿನ್‌ಗೌಡ

### ವಿಧಾನಸಭೆ ಕ್ಷೇತ್ರ



**ಜಮಖಂಡಿ**
**ಕಾಂಗ್ರೆಸ್:** ಆನಂದ್ ನ್ಯಾಮಗೌಡ
**ಬಿಜೆಪಿ:** ಶ್ರೀಕಾಂತ್ ಕುಲಕರ್ಣಿ / ಸಂಗಮೇಶ್ ನಿರಾಣಿ



**ರಾಮನಗರ**
**ಜೆಡಿಎಸ್:** ಅನಿತಾ ಕುಮಾರಸ್ವಾಮಿ
**ಬಿಜೆಪಿ:** ರುದ್ರೇಶ್

### ಪ್ರತಿಷ್ಠೆಯೇ ಅವಕಾಶ

ನಾಲ್ಕು ತಿಂಗಳ ಭಾಗ್ಯಕ್ಕೆ ಚುನಾವಣೆ ನಡೆಯುವುದಾದರೂ, ಈ ಚುನಾವಣೆಯಲ್ಲಿ ತನ್ನ ಅಸ್ತಿತ್ವವನ್ನು ಸಾಬೀತು ಮಾಡುವ ಅನಿವಾರ್ಯತೆ ಮೂರು ಪಕ್ಷಗಳಿಗಿದೆ. ಹೀಗಾಗಿ ಈ ಇದೇ ಅಂಶವನ್ನು ಬಳಸಿ, ಗೆಲ್ಲುವ ಮಾನದಂಡವನ್ನೇ ಅಸ್ತ್ರವಾಗಿಸಿಕೊಂಡು ತಮ್ಮ ಕುಟುಂಬ ಕುಡಿಯನ್ನು ರಾಜಕೀಯದಲ್ಲಿ ನೆಡಲು ಮೂರೂ ಪಕ್ಷಗಳಲ್ಲಿ ಸಿದ್ಧತೆ ನಡೆದಿದೆ.

### ರಾಜಕಾರಣದಲ್ಲಿ ಗೌಡರ ಕುಟುಂಬದ ವಂಶವೃಕ್ಷ

ನಾಳೆ ಕಾಂಗ್ರೆಸ್ ಸಭೆ »07

# ಉಪಸಮರಕ್ಕೆ ಅನ್ಯರ ನಿರಾಸಕ್ತಿ, ಫ್ಯಾಮಿಲಿ ಆಸಕ್ತಿ!

» ಮೊದಲ ಪುಟದಿಂದ

**3 ಕ್ಷೇತ್ರಗಳಲ್ಲೂ ಕುಟುಂಬ ಸದಸ್ಯರು!**

ಪ್ರಮುಖವಾಗಿ ಮಂಡ್ಯದಿಂದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಮೊಮ್ಮಗ ಹಾಗೂ ಹಾಲಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಪುತ್ರ ನಿಖಿಲ್ ಸ್ಪರ್ಧೆಯ ಮಾತು ಕೇಳಿ ಬಂದಿದೆ. ಶಿವಮೊಗ್ಗದಿಂದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ಎಸ್. ಯಡಿಯೂರಪ್ಪ ಪುತ್ರ ಬಿ.ವೈ. ರಾಘವೇಂದ್ರ ಸ್ಪರ್ಧೆ ಖಚಿತವಾಗಿದೆ. ಶಿವಮೊಗ್ಗ ಬಿಜೆಪಿ ಘಟಕದಿಂದ ರಾಘವೇಂದ್ರ ಹೆಸರನ್ನು ಅಂತಿಮಗೊಳಿಸಲಾಗಿದ್ದು, ವರಿಷ್ಠರ ಗ್ರೀನ್ ಸಿಗ್ನಲ್ ಸಿಗುವುದೊಂದು ಬಾಕಿಯಿದೆ. ಬಳ್ಳಾರಿಯಿಂದ ಶಾಸಕ ಬಿ. ಶ್ರೀರಾಮುಲು ಸಹೋದರಿ ಶಾಂತಾ ಅವರನ್ನು ಬಿಜೆಪಿಯಿಂದ ಸ್ಪರ್ಧೆಗಿಳಿಸುವುದು ಬಹುತೇಕ ನಿಶ್ಚಿತ. ಜತೆಗೆ ಶಿವಮೊಗ್ಗ ಕ್ಷೇತ್ರವನ್ನು ಮಿತ್ರಪಕ್ಷಕ್ಕೆ ಬಿಟ್ಟುಕೊಡುವ ನಿರ್ಧಾರವನ್ನು ಕಾಂಗ್ರೆಸ್ ತಳೆದರೆ ಜೆಡಿಎಸ್‌ನಿಂದ ಮಾಜಿ ಸಿಎಂ ಬಂಗಾರಪ್ಪ ಪುತ್ರ ಹಾಗೂ ಮಾಜಿ ಶಾಸಕ ಮಧು ಬಂಗಾರಪ್ಪ ಕಣಕ್ಕಿಳಿಯುವ ಸಾಧ್ಯತೆಯಿದೆ. ಇದೇ ರೀತಿಯಲ್ಲಿ ಕಣ ಚಿತ್ರಣ ಅಂತಿಮಗೊಂಡರೆ ಉಪ ಚುನಾವಣೆ ನಡೆಯುವ 3 ಲೋಕಸಭೆ ಕ್ಷೇತ್ರಗಳಲ್ಲೂ ಕುಟುಂಬ ರಾಜಕಾರಣವೇ ವಿಜೃಂಭಿಸಲಿದೆ.

ಮಂಡ್ಯದಲ್ಲಿ ಬಿಜೆಪಿಗೆ ಪ್ರಬಲ ಅಭ್ಯರ್ಥಿಯಿಲ್ಲದಿದ್ದರೂ ನೆಪಮಾತ್ರಕ್ಕೆ ಸ್ಪರ್ಧೆ ಮಾಡಲಿದೆ. ಮಾಜಿ ಸಚಿವ ಚಲುವರಾಯಸ್ವಾಮಿ ಅವರನ್ನು ಸೆಳೆಯುವ ಯತ್ನವನ್ನು ಬಿಜೆಪಿ ಮಾಡುತ್ತಿದ್ದು, ಅವರು ಸ್ಪರ್ಧಿಸುವ ಸಾಧ್ಯತೆ ಕಡಿಮೆ. ಈ ನಡುವೆಯೂ ಸ್ಥಳೀಯ ರಾಜಕಾರಣದ ಲೆಕ್ಕಾಚಾರದಲ್ಲಿ ಅವರು ಬಿಜೆಪಿ ಪಾಳಯ ಸೇರಿ ಅದೃಷ್ಟ ಪರೀಕ್ಷೆಗಿಳಿಯುವ ಸಾಧ್ಯತೆಯೂ ಇದೆ. ರಾಮನಗರದಿಂದ ಬಿಜೆಪಿಯಿಂದ ಸ್ಪರ್ಧಿಸುವ ಉಮೇದಿನಲ್ಲಿದ್ದ ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಇದೀಗ ಮನಸ್ಸು ಬದಲಿಸಿದ್ದಾರೆ. ಹಾಗಾಗಿ ಪಕ್ಷದ ರಾಮನಗರ ಜಿಲ್ಲಾ ಘಟಕದ ಅಧ್ಯಕ್ಷ ರುದ್ರೇಶ್ ಅವರನ್ನೇ ಕಣಕ್ಕಿಳಿಸಲು ಬಿಜೆಪಿ ಮನಸ್ಸು ಮಾಡಿದೆ.

ಬಳ್ಳಾರಿಯಿಂದ ಕಾಂಗ್ರೆಸ್‌ನಲ್ಲಿ ಪ್ರಬಲ ಅಭ್ಯರ್ಥಿಗಾಗಿ ಶೋಧ ನಡೆದಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಿ.ಕೆ. ಶಿವಕುಮಾರ್ ಈ ಚುನಾವಣೆಯನ್ನು ಸವಾಲಾಗಿ ಸ್ವೀಕರಿಸಿದ್ದಾರೆ. ಬಳ್ಳಾರಿ ಗ್ರಾಮಾಂತರ ಶಾಸಕ ನಾಗೇಂದ್ರ ಸಹೋದರ ಪ್ರಸಾದ್ ಹೆಸರು ಕೇಳಿ ಬಂದಿದೆ.

ಕಾಂಗ್ರೆಸ್‌ನಲ್ಲಿ ಶಿವಮೊಗ್ಗ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವುದಕ್ಕೆ ಭಿನ್ನಾಭಿಪ್ರಾಯವಿದೆ. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಂಜುನಾಥ ಭಂಡಾರಿ ಹಾಗೂ ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಹೆಸರು ಕೇಳಿಬಂದಿದ್ದು, ಪಕ್ಷದ ರಾಜ್ಯ ಉಸ್ತುವಾರಿ ನೇತೃತ್ವದಲ್ಲಿ ಮಂಗಳವಾರ ನಡೆಯುವ ಸಭೆಯಲ್ಲಿ ಈ ವಿಚಾರದಲ್ಲಿ ಸ್ಪಷ್ಟ ತೀರ್ಮಾನವಾಗಲಿದೆ ಎಂದು ತಿಳಿದು ಬಂದಿದೆ.

**ಅಸೆಂಬ್ಲಿ ಬೈ ಎಲೆಕ್ಷನ್‌ನಲ್ಲೂ ಕುಟುಂಬ ರಾಜಕಾರಣ:** 2 ವಿಧಾನಸಭೆ ಕ್ಷೇತ್ರಗಳಿಗೆ ನಡೆಯುವ ಚುನಾವಣೆಯನ್ನು ರಾಜಕೀಯ ಪಕ್ಷಗಳು ಗಂಭೀರವಾಗಿ ಪರಿಗಣಿಸಿವೆ. ಆದರೆ, ಇಲ್ಲಿಯೂ ಫ್ಯಾಮಿಲಿ ಪಾಲಿಟಿಕ್ಸ್ ಮೇಲುಗೈ ಪಡೆದಿದೆ. ಜಮಖಂಡಿಯಲ್ಲಿ ಕಾಂಗ್ರೆಸ್‌ನಿಂದ ಮಾಜಿ ಶಾಸಕ ದಿವಂಗತ ಸಿದ್ದು ನ್ಯಾಮಗೌಡ ಪುತ್ರ ಆನಂದ್ ನ್ಯಾಮಗೌಡ ಅವರನ್ನು ಕಣಕ್ಕಿಳಿಸುವುದು ಖಚಿತವಾಗಿದೆ. ಮೈತ್ರಿ ಸೂತ್ರದಂತೆ ಜೆಡಿಎಸ್ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಬೆಂಬಲಿಸಲಿದೆ. ಬಿಜೆಪಿಯಿಂದ ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಅವರಿಗೆ ಟಿಕೆಟ್ ನೀಡುವುದು ಪಕ್ಷದ ನಾಯಕತ್ವದ ತೀರ್ಮಾನವಾಗಿದೆ.

ಆದರೆ, ಶಾಸಕ ಮುರುಗೇಶ್ ನಿರಾಣಿ ಸಹೋದರ ಸಂಗಮೇಶ್ ನಿರಾಣಿ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಅವರಿಗೆ ಟಿಕೆಟ್ ನೀಡದಿದ್ದರೆ ಬಂಡಾಯ ಹೂಡುವ ಸಾಧ್ಯತೆ ನಿಚ್ಚಳವಾಗಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲೂ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಅವರು, 20 ಸಾವಿರಕ್ಕೂ ಅಧಿಕ ಮತ ಪಡೆದು ಪಕ್ಷದ ಅಧಿಕೃತ ಅಭ್ಯರ್ಥಿ ಕುಲಕರ್ಣಿ ಸೋಲಿಗೆ ಕಾರಣರಾಗಿದ್ದರು. ನಿರಾಣಿ ಅವರ ಮತ್ತೊಬ್ಬ ಸಹೋದರ ಹಣಮಂತ ನಿರಾಣಿ ವಿಧಾನ ಪರಿಷತ್ ಸದಸ್ಯರಾಗಿದ್ದಾರೆ. ಈ ನಡುವೆಯೂ ತಮ್ಮ ಕುಟುಂಬ ಸದಸ್ಯರಿಗೇ ಜಮಖಂಡಿಯಿಂದ ಟಿಕೆಟ್ ನೀಡಬೇಕೆಂಬ ಒತ್ತಡ ನಿರಾಣಿ ಸಹೋದರರದ್ದಾಗಿದೆ. ರಾಮನಗರದಲ್ಲಿ ಜೆಡಿಎಸ್‌ನಿಂದ ಅನಿತಾ ಕುಮಾರಸ್ವಾಮಿ ಸ್ಪರ್ಧಿಸಲಿದ್ದು ಕಾಂಗ್ರೆಸ್ ಬೆಂಬಲಿಸಲಿದೆ.